

## ನಂಬಿ, ಪ್ಲೀಸ್!

ದಿಗಂತ್ ಗನ್ ಹಿಡಿದರೆ ಹೇಗಿರುತ್ತದೆ?

'ಪರಪಂಚ' ಚಿತ್ರಕ್ಕಾಗಿ ದಿಗಂತ್ ಬೆತ್ತಲೆ ಓಡಿದರು ಎಂದು ವಿವಾದ ಆಯಿತಲ್ಲ; ಈ ಗನ್ ಪ್ರಸಂಗ ಅಂಥ ವದಂತಿಯೇನೂ ಅಲ್ಲ. ಅವರು ನಿಜಕ್ಕೂ ಗನ್ ಹಿಡಿಯಲು ಹೊರಟಿದ್ದಾರೆ. 'ಶಾರ್ಪ್ ಶೂಟರ್' ಚಿತ್ರಕ್ಕಾಗಿ. ಸಿನಿಮಾದ ಹೆಸರಿನಲ್ಲೇ ಶೂಟರ್ ಎಂದಿರುವಾಗ ಅವರು ಗನ್ ಹಿಡಿಯದಿದ್ದರೆ ಹೇಗೆ? ಆದರೆ, ದೂದ್‌ಪೇಡ ಎಂದು ಅಭಿಮಾನಿಗಳಿಂದ ಗಲ್ಲ ಹಿಂಡಿಸಿಕೊಳ್ಳುವ ಈ ಹುಡುಗ ಬಂದೂಕು ಹಿಡಿಯುವುದನ್ನು ಪ್ರೇಕ್ಷಕರು ಕಲ್ಪಿಸಿಕೊಳ್ಳುವುದು ಕಷ್ಟವಲ್ಲವೇ? ಆ ಕಾರಣಕ್ಕಾಗಿಯೇ, 'ಶಾರ್ಪ್ ಶೂಟರ್' ಶೀರ್ಷಿಕೆಯ ಅಡಿಬರಹ– 'ನಂಬಿ ಪ್ಲೀಸ್'.

ಗುಳಿಕೆನ್ನೆಯ ಹುಡುಗನ ಕೈಗೆ ಗನ್ ಕೊಟ್ಟಿರುವುದು ನಿರ್ದೇಶಕ ಗೌಸ್ ಪೀರ್. ಈವರೆಗೆ ಸಿನಿಮಾಗಳಿಗೆ ಕಥೆ ಹಾಗೂ ಹಾಡು ಬರೆದುಕೊಂಡು ನೆಮ್ಮದಿಯಾಗಿದ್ದ ಗೌಸ್ ಪೀರ್ ಅವರಿಗಿದು ನಿರ್ದೇಶಕರಾಗಿ ಚೊಚ್ಚಿಲ ಸಿನಿಮಾ. ಕನ್ನಡ ಸಿನಿಮಾದ ಗೀತರಚನೆಕಾರರೆಲ್ಲ ಈಗ ನಿರ್ದೇಶಕರಾಗುವ ಪ್ರಯತ್ನದಲ್ಲಿದ್ದಾರೆ. ಬಹುಶಃ, ಗೌಸ್ ಪೀರ್‌ರ ಈ ಸಿನಿಮಾ ಉಳಿದವರಿಗೆ ಸ್ಫೂರ್ತಿದಾಯಕವಾಗಬಹುದು. ತಮ್ಮ ರೂಪಾಂತರದಂತೆಯೇ ದಿಗಂತ್‌ಗೆ ಕೂಡ ಹೊಸ ವರ್ಚಸ್ಸು ನೀಡುವ ಪ್ರಯತ್ನ ನಿರ್ದೇಶಕರದು. ಅಂದ ಹಾಗೆ, ಈ ಸಾಹಸಮಯ ಕಥನದ ಸಿನಿಮಾದಲ್ಲಿ ಹಾಸ್ಯಕ್ಕೂ ಸಾಕಷ್ಟು ಅವಕಾಶ ಇದೆಯಂತೆ. 'ನವರಸಗಳನ್ನೂ ಒಳಗೊಳ್ಳಲಿರುವ ನಮ್ಮ ಸಿನಿಮಾ ಪಕ್ಕಾ ಎಂಟರ್‌ಟೈನರ್' ಎನ್ನುವುದು ನಿರ್ದೇಶಕರ ಬಣ್ಣನೆ.

ಮುಂಬಯಿ ಹುಡುಗಿ ಸಂಗೀತಾ 'ಶಾರ್ಪ್ ಶೂಟರ್'ಗೆ ನಾಯಕಿ. ರೂಪದರ್ಶಿಯಾಗಿ ಅನುಭವ ಪಡೆದಿರುವ ಸಂಗೀತಾಗೆ ಕನ್ನಡ ಚಿತ್ರರಂಗದ ಮೂಲಕ ಬೆಳ್ಳಿತೆರೆಯಲ್ಲಿ ಭವಿಷ್ಯ ಕಂಡುಕೊಳ್ಳುವ ಆಸೆ.



## ನಟಿಯಾಗುವ ದಿಶೆಯಲ್ಲಿ...

'ಸಿನಿಮಾಗಳ ಸಂಖ್ಯೆಯಲ್ಲಿ ನನಗೆ ನಂಬಿಕೆಯಿಲ್ಲ. ಒಳ್ಳೆಯ ನಟಿ ಎನ್ನಿಸಿಕೊಳ್ಳುವುದು ನನ್ನ ಆಸೆ' ಎನ್ನುವ ಈ ಚೆಲುವೆಯ ಹೆಸರು ದಿಶಾ ಪಾಂಡೆ. ಕನ್ನಡ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಹಾತೊರೆಯುತ್ತಿರುವ ದಿಶಾ 'ಸುಬ್ರಮಣಿ... ನಂ ಹುಡ್ಗ' ಚಿತ್ರದ ನಾಯಕಿ.

ಹೆಸರಿನಲ್ಲಿ ಪಾಂಡೆ ಎನ್ನುವ ವಿಶೇಷಣ ಇರುವುದರಿಂದ, 'ನಾನು ಪೂನಂ ಪಾಂಡೆ ಅಲ್ಲ. ನನಗೂ ಆಕೆಗೂ ಸಂಬಂಧ ಇಲ್ಲ' ಎನ್ನುವ ಸ್ಪಷ್ಟನೆಯನ್ನು ಪದೇ ಪದೇ ಕೊಡುವ ಅನಿವಾರ್ಯತೆ ದಿಶಾ ಅವರದು. ಅವರ ಈ ಸ್ಪಷ್ಟನೆಯಲ್ಲಿ, ನಾನು ಕೇವಲ ಗ್ಲಾಮರ್ ಅಷ್ಟೇ ನೆಚ್ಚಿಕೊಂಡ ಹುಡುಗಿಯಲ್ಲ, ಪ್ರತಿಭೆಯನ್ನು ನೆಚ್ಚಿಕೊಂಡವಳು ಎನ್ನುವ ಇಂಗಿತವೂ ಇದ್ದಂತಿದೆ. ಗ್ಲಾಮರ್ ಮತ್ತು ನಟನೆಯ ನಡುವಣ ಸೂಕ್ಷ್ಮಗಳನ್ನು ಅರಿತವರಂತೆ ಮಾತನಾಡುವ ದಿಶಾ, ನಟಿ ಎನ್ನಿಸಿಕೊಳ್ಳುವ ಹಂಬಲ ಹೊಂದಿದ್ದಾರೆ. 'ಸುಬ್ರಮಣಿ' ಸಿನಿಮಾ ಅವರ ಪಾಲಿಗೆ ಪಾಠಶಾಲೆಯಂತೆಯೂ ಪರಿಣಮಿಸಿದೆ. ಅವರಿಗೆ ಜೋಡಿಯಾಗಿ ನಟಿಸಿರುವುದು ಶ್ರೀನಗರ ಕಿಟ್ಟಿ. ಹಾಂ, ಪೂರ್ಣಿಮಾ ಎನ್ನುವ ಮತ್ತೊಬ್ಬ ಹುಡುಗಿಯೂ ಚಿತ್ರದ ಮುಖ್ಯಪಾತ್ರದಲ್ಲಿದ್ದಾಳೆ.

ಕೊನೆಯ ಹಂತದ ಚಿತ್ರೀಕರಣವಷ್ಟೇ ಬಾಕಿ ಇರುವ 'ಸುಬ್ರಮಣಿ' ಚಿತ್ರದ ನಿರ್ದೇಶನ ಜೆಕೆಎಸ್ ಅವರದ್ದು. ಈ ಮೊದಲು 'ಜೆಕೆ' ಹೆಸರಿನಲ್ಲಿ 'ಶತ್ರು' ಸಿನಿಮಾ ನಿರ್ದೇಶಿಸಿದ್ದ ಇವರು, ಈ ಚಿತ್ರದಲ್ಲಿ ತಮ್ಮ ಹೆಸರಿಗೆ ಮತ್ತೊಂದು ಅಕ್ಷರ ಸೇರಿಸಿಕೊಂಡಿದ್ದಾರೆ. ನಿರ್ದೇಶನದ ಜೊತೆಗೆ– ಕಥೆ, ಚಿತ್ರಕಥೆ, ಸಂಭಾಷಣೆಯೂ ಅವರದ್ದೇ.

■ ರಘು